ತನ್ನೊಳಗಿಳಿದು ಅರ್ಥೈಸಿಕೊಳ್ಳುವುದಕ್ಕೆ ಸಮಯಾವಕಾಶವನ್ನು ಬೇಡುತ್ತಿದೆಯೆ? ಸಾಯುವುದಕ್ಕೆ ಮುಂಚೆ ಸಿಕ್ಕ ಒಂದು ಅವಕಾಶವನ್ನಾದರೂ ಉಪಯೋಗಿಸಿಕೊಂಡು ಸಾಯುವ ಹುನ್ನಾರ ಮನದಲ್ಲೇನಾದರೂ ತನಗೇ ಗೊತ್ತಿಲ್ಲದಂತೆ ಭುಗಿಲೇಳುತ್ತಿದೆಯೆ? ಯಾಕೋ ಎಲ್ಲವೂ ಮತ್ತೆ ಗಜಿಬಿಜಿಯಾಗತೊಡಗಿತು.

ತಕ್ಷಣ ಸಾವನ್ನು ಕುರಿತು ಇಷ್ಟು ಗಹನವಾಗಿ ಯೋಚಿಸುತ್ತಿದ್ದುದ್ದಕ್ಕೇನಾದರೂ ಎಲ್ಲವೂ ಅಸ್ಪಷ್ಟವಾಗಿ ಗೋಜಲಾಗುತ್ತಿದೆಯೇ ಎನ್ನುವ ಅನುಮಾನ ಬಂದಿದ್ದೇ ಮರಳಿ ನೆಟ್‌ಗೆ ನುಸುಳಿ, 'ವಾಟ್ ಈಸ್ ಡೆತ್?' ಅಂತ ಹಾಕಿದ. ರಾಶಿ ಪುಟಗಳು ತೆರೆದುಕೊಂಡು ಗಾಬರಿ ಹುಟ್ಟಿಸಿದವು. ಸಾವಿನ ಬಗ್ಗೆ ಇಷ್ಟೊಂದು ವ್ಯಾಖ್ಯಾನ ಕೊಟ್ಟವರು ಯಾರು? ಸತ್ತವರಂತೂ ಸಾಧ್ಯವಿಲ್ಲ; ಬದುಕಿದವರಿಗೆ ಆ ಅನುಭವವಿಲ್ಲ. ಬೈಬಲ್ ಏನು ಹೇಳುತ್ತೆ, ಸ್ಪಿರುಚ್ಯುವಲ್ ನಾಯಕರ ಉವಾಚ, ತನ್ನ ತಂದೆ/ತಾಯಿ ಅನುಭವ, ಹೆಂಡತಿ/ಗಂಡ ಅನುಭವ, ಗೆಳತಿ/ಗೆಳೆಯ ಅನುಭವ, ಅವರಿವರ ಅನುಭವವನ್ನು ಸಾಕ್ಷಾತ್ ಕಂಡಂತಹ ತಮ್ಮ ಅನುಭವ, ಡಾಕ್ಟರ್ ಹೇಳಿಕೆ, ಮತ್ತೊಂದು, ಮಗದೊಂದು; ಸ್ಟೀವ್ ಜಾಬ್ ಹೇಳಿಕೆ: **'Remembering that you are going to die is the best way I know to avoid the trap of thinking you have something to lose. You are already naked. There is no reason not to follow your heart'**; ಇನ್ಯಾರದ್ದೋ: **'Death has always been a part of life. Infact, Death is Life and Life is Death. When we take one of our first breath, we also take one of our last...'** ಹನುಮಂತನ ಬಾಲದ ಹಾಗೆ, ಪುಟ, ಪುಟಗಳಲ್ಲಿನ ವಿವರ, ವ್ಯಾಖ್ಯಾನ, ಟಿಪ್ಪಣಿಗಳನ್ನು ನೋಡಿ, ಓದಿ, ಹುಡುಕುತ್ತಿದ್ದದ್ದು ಮತ್ತಷ್ಟು ಗೋಜಲಾಗಿ ಸದಾನಂದ ಕಂಪ್ಯೂಟರ್ ಮುಚ್ಚಿದ.

ಮರುಕ್ಷಣ ಹೀಗೆ ಕೂತುಬಿಟ್ಟರೆ ಸಮಯ ವ್ಯರ್ಥವಾಗಿ ಕಳೆದು ಹೋಗುತ್ತದೆಂದು ಥಕ್ಕನೆ ಹೊಳೆದು ದಡಬಡಿಸಿ ಗಂಟೆ ನೋಡಿದ. ಓಹ್ ಶಿಟ್! ಕಾಲ ಎಷ್ಟು ವೇಗವಾಗಿ ಓಡುತ್ತಿದೆ ಅನ್ನುವುದು ಮೊದಲ ಬಾರಿಗೆ ಅರಿವಿಗೆ ಬಂದು ತತ್ತರಿಸಿದ. ಕಾಲವೇ ಮುಂದೆ ಓಡದೆ ಶನಿವಾರ ಭಾನುವಾರಗಳು ಸುದೀರ್ಘವಾಗಿ ಬೆಳೆದು, ಹೊತ್ತು ದೂಡಲಿಕ್ಕಾಗಿಯೇ ಕಂಪ್ಯೂಟರ್‌ನಲ್ಲಿ ಪೈರೆಸಿಯಿಂದ ಭಟ್ಟಿಯಿಳಿಸಿಕೊಂಡ ಪ್ರಪಂಚದ ಯಾವ ಯಾವುದೋ ಮೂಲೆಯ ಸಿನಿಮಾ ನೋಡುತ್ತಲೋ, ಗಂಟೆಗಟ್ಟಲೆ ಗೇಮ್ಸ್ ಆಡುತ್ತಲೋ ರಜೆಯ ದಿನಗಳನ್ನು ದೂಡುತ್ತಿದ್ದದ್ದು ನೆನಪಾಗಿ ಅವನ ಕಣ್ಣಂಚಿನಲ್ಲಿ ಕಂಬನಿ ಜಿನುಗಿತು. 'ಛೇ! ಎಷ್ಟು ಸೆಂಟಿಮೆಂಟ್ ಆದೆ!' ಎಂದು ಮೈ ಮುರಿದು ರೂಮೊಳಗೆ ಹೋಗಿ ಮಂಚದ ಮೇಲೆ ಅಡ್ಡಾದ. ಹೊತ್ತೇರಿದ ಕತ್ತಲಲ್ಲಿ ಹೊರಗಿನ ರಸ್ತೆ ಸದ್ದುಗಳು ನಿಧಾನವಾಗಿ ತಣ್ಣಗಾಗುತ್ತಾ ಬರುತ್ತಿದ್ದವು. ಅಲ್ಲೊಂದು ಇಲ್ಲೊಂದು ವಾಹನಗಳ ಹಾರನ್ ಸದ್ದು ಬಿಟ್ಟರೆ ಬರೀ ನಿಶ್ಯಬ್ದ! ಆ ನಿಶ್ಯಬ್ದದಲ್ಲಿ ಸೀಳಿಕೊಂಡು ಬರುತ್ತಿದ್ದದ್ದು ಇದೀಗಷ್ಟೇ ಹಾಲಿನಲ್ಲಿ ನೇತುಹಾಕಿಸಿಕೊಂಡ ಹೊಸ ಗಡಿಯಾರದ ಟಿಕ್... ಟಿಕ್... ಟಿಕ್... ಟಿಕ್!... ಅದು ಸುತ್ತಿಗೆಯಿಂದ ಅವನ ತಲೆಯೊಳಗೆ ಬಡಿಯುತ್ತಿತ್ತು! ಮುಚ್ಚಿದ ಕಣ್ಣೊಳಗಿನ ಕತ್ತಲೊಳಗೂ ಪೂತನಿಯಂತೆ ಚೀತ್ಕರಿಸುತ್ತಿತ್ತು!

ನಿದ್ರೆ ಮಾತ್ರೆಯಿರದೆ ನಿದ್ದೆ ಬರಲಿಕ್ಕಿಲ್ಲವೆನ್ನಿಸಿದ್ದೇ ದಢಕ್ಕನೆದ್ದು ಮೆಡಿಕಲ್ ಶಾಪಿಗೆ ಹೊರಡಲು ಉದ್ಯುಕ್ತನಾದ. ತಕ್ಷಣ ಅನುಮಾನ ಬಂದಿತು. ಡಾಕ್ಟರ್ ಪ್ರಿಸ್ಕ್ರಿಪ್ಷನ್ ಇಲ್ಲದೇ ಯಾರೂ ಮಾತ್ರೆ ಕೊಡಲು ಸಿದ್ಧರಿರುವುದಿಲ್ಲ. ಅದಕ್ಕಾಗಿ ಮತ್ತೊಂದಿಷ್ಟು ಕತೆಗಳನ್ನು ಈ ಕಡೇ ಗಳಿಗೆಯಲ್ಲಿ ಪೋಣಿಸಬೇಕೇ? ಸಾವಿನ ಎದುರು ನಿಂತ ತಾನೀಗ ಗೌತಮ ಬುದ್ಧ! ನಿರ್ಲಿಪ್ತ! ಮನಸ್ಸನ್ನು